ಸಾಕ್ಷಿಯನ್ನು ದಿ: 11.02.2026 ರಂದು ಪುನಃ ಕರೆಸಿ ಪ್ರಮಾಣ ಮಾಡಿಸಲಾಯಿತು. ಡಿ.ಡಬ್ಲ್ಯೂ-1

**ಪಾಟೀಸವಾಲುಃ- ವಾದಿಗಳ ಪರ ವಕೀಲರಿಂದ:-**

1. ಪ್ರಸ್ತುತ ದಾವೆಯನ್ನು ಯಾರು ಯಾರ ವಿರುದ್ದ ಸಲ್ಲಿಸಿದ್ದಾರೆಂದು ನನಗೆ ಗೊತ್ತಿಲ್ಲ. ನನ್ನ ಗಂಡ ವ್ಯವಸಾಯ ಹಾಗೂ ಹೈನುಗಾರಿಕೆ ಮಾಡುತ್ತಾರೆ. ಸಾಕ್ಷಿ ಮುಂದುವರೆದು ಅವರ ಜೊತೆ ನಾನು ಮಾಡುತ್ತೇನೆಂದು ನುಡಿಯುತ್ತಾರೆ. ನನ್ನ ಗಂಡ ವಿದ್ಯಾಭ್ಯಾಸ ಮಾಡಿಲ್ಲ, ಆದರೆ ಸಹಿ ಮಾಡುತ್ತಾರೆ. 1 ನೇ ಪ್ರತಿವಾದಿ ನನ್ನ ಗಂಡ ಹಾಗೂ ನಾನು ವಾದಿಗೆ ಕ್ರಯದ ಕರಾರು ಪತ್ರ ಬರೆದುಕೊಟ್ಟಿದ್ದೇವೆಂದರೆ ಗೊತ್ತಿಲ್ಲ, ಸಾಕ್ಷಿ ಮುಂದುವರೆದು ಸಾಲದ ಪತ್ರ ಬರೆದುಕೊಟ್ಟಿದ್ದೇವೆಂದು ನುಡಿಯುತ್ತಾರೆ. ನಿಪಿ.1 ರಲ್ಲಿ ನೋಡುತ್ತಿರುವ ಭಾವಚಿತ್ರಗಳು ನನ್ನ ಗಂಡ ಹಾಗೂ 1 ನೇ ಪ್ರತಿವಾದಿಗೆ ಸೇರಿದ್ದು ಎಂದರೆ ಸರಿ. ಆಗ ನನ್ನ ಗಂಡ ಹಾಗೂ ನನ್ನ ಅತ್ತೆ ವಾದಿಗೆ ಕ್ರಯದ ಕರಾರು ಪತ್ರವನ್ನು ಮಳವಳ್ಳಿ ಉಪನೊಂದಣಾಧಿಕಾರಿ ಕಛೇರಿಯಲ್ಲಿ ಬರೆದುಕೊಟ್ಟಿದ್ದಾರೆಂದರೆ ಸರಿ.

2. ಅದೇ ದಿನ ನನ್ನ ಅತ್ತೆ ಹಾಗೂ ನನ್ನ ಗಂಡ ವಾದಿಗೆ ಇನ್ನೊಂದು ಕ್ರಯದ ಕರಾರು ಪತ್ರ ಬರೆದು ಕೊಟ್ಟಿದ್ದರು ಎಂದರೆ ಸರಿಯಲ್ಲ. ಸದರಿ ಪತ್ರಕ್ಕೆ ಸಂಬಂಧಿಸಿ ಮಳವಳ್ಳಿಯ 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯದಲ್ಲಿ ನಡೆಯುತ್ತಿದ್ದ ಅಸಲು ದಾವಾ ಸಂಃ 172/2019 ರ ದಾವೆಯಲ್ಲಿ ನಾನು ಸಾಕ್ಷಿ ವಿಚಾರಣೆ ನುಡಿದಿದ್ದೇನೆಂದರೆ ಸರಿ. ಆಗ ನಾನು ನನ್ನ ಅತ್ತೆ ಹಾಗೂ ಗಂಡ ಕ್ರಯದ ಕರಾರು ಪತ್ರ ಬರೆದುಕೊಟ್ಟಿದ್ದಾರೆಂದು ನುಡಿದಿದ್ದೇನೆಂದರೆ ಸರಿಯಲ್ಲ. ಸದರಿ ದಾವೆ ಪುರಸ್ಕರಿಸಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ನಿಡಿ.1 ನ್ನು ಎಲ್ಲಿ ಹಾಗೂ ಯಾವಾಗ ಮಾಡಿಸಿದ್ದೇನೆಂದು ನನಗೆ ಗೊತ್ತಿಲ್ಲ. ನಿಡಿ.1 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ ಸಂಗತಿಗಳು ನನಗೆ ಗೊತ್ತಿಲ್ಲ. ಸದರಿ ಪತ್ರಕ್ಕೆ ನಾನು ಎಲ್ಲಿ ಸಹಿ ಮಾಡಿದ್ದೇನೆಂದು ನನಗೆ ಗೊತ್ತಿಲ್ಲ.

3. ದಿಃ 27.08.2013 ರಂದು 1 ಹಾಗೂ 2 ನೇ ಪ್ರತಿವಾದಿ ವಾದಿಗೆ 2 ಲಕ್ಷಕ್ಕೆ ಕ್ರಯದ ಕರಾರು ಪತ್ರವನ್ನು ಬರೆದುಕೊಟ್ಟಿದ್ದಾರೆಂದರೆ ನನಗೆ ಗೊತ್ತಿಲ್ಲ. ಆಗ ರೂ.1,90,000/- ಹಣವನ್ನು 1 ಮತ್ತು 2 ನೇ ಪ್ರತಿವಾದಿಗೆ ಮುಂಗಡವಾಗಿ ಕೊಟ್ಟಿದ್ದಾರೆಂದರೆ ನನಗೆ ಗೊತ್ತಿಲ್ಲ.

ಉಳಿದ ರೂ.10,000/- ನೊಂದಣಿ ಸಮಯದಲ್ಲಿ ಪಡೆದುಕೊಳ್ಳುವುದಾಗಿ ಒಪ್ಪಿಕೊಂಡಿದ್ದರು ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ನನ್ನ ಗಂಡನಿಗೆ ವ್ಯವಹಾರಿಕ ಜ್ಞಾನ ಇಲ್ಲ ಎಂದು ನುಡಿಯುತ್ತಾರೆ. ನನ್ನ ಗಂಡ ವ್ಯವಸಾಯ ಹಾಗೂ ಹೈನುಗಾರಿಕೆ ಮಾಡುತ್ತಿದ್ದರಿಂದ ವ್ಯವಹಾರ ಜ್ಞಾನವಿದೆ ಎಂದರೆ ಸರಿಯಲ್ಲ. ವಾದಿಗೆ ದಾವಾ ಆಸ್ತಿ ಕೊಡಬಾರದು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

4. ವಾದಿ ಹಾಗೂ 1 ನೇ ಪ್ರತಿವಾದಿ ಅಕ್ಕತಂಗಿಯರು. ವಾದಿಯಿಂದ ಮುಂಗಡ ಹಣವನ್ನು ಪಡೆದುಕೊಂಡು ಈಗ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ನನ್ನ ಉಕ್ತಲೇಖನದ ಮೂಲಕ ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.

ಪ್ರಧಾನ ಸಿ.ಜೆ. ಮತ್ತು ಜೆ.ಎಂಎಫ್.ಸಿ
ಮಳವಳ್ಳಿ